**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರು ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ನಾಗನೂರು ಪಿ.ಕೆ. ಗ್ರಾಮದಲ್ಲಿ ಪ್ರತಿ ವರ್ಷ ಪ್ರವಾಹದಿಂದ ತೊಂದರೆಗೀಡಾಗುವ ಹಾಗೂ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವ ಈ ಗ್ರಾಮಸ್ಥರ ಅನಾನುಕೂಲದ ಬಗ್ಗೆ ನಿಯಮ-330 ರಡಿಯಲ್ಲಿ ಪ್ರಸ್ತಾಪಿಸಿರುವ ವಿಷಯದ ಕುರಿತು ಮಾನ್ಯ ಜಲಸಂಪನ್ಮೂಲ ಸಚಿವರ ಉತ್ತರ.**

ಕೃಷ್ಣಾ ನದಿಯ ಗರಿಷ್ಠ ಪ್ರವಾಹದ ಮಟ್ಟದಡಿ (531.40 ಮೀ) ಬಾಧಿತಗೊಳ್ಳುವ ಬೆಳಗಾವಿ ಜಿಲ್ಲೆಯ 22 ಗ್ರಾಮಗಳು ಹಾಗೂ ಬಾಗಲಕೋಟ ಜಿಲ್ಲೆಯ 04 ಗ್ರಾಮಗಳು, ಹೀಗೆ ಒಟ್ಟು 26 ಗ್ರಾಮಗಳನ್ನು 12 ಪುನರ್ವಸತಿ ಕೇಂದ್ರ ಹಾಗೂ 05 ಗ್ರಾಮ ವಿಸ್ತರಣೆ ಕೇಂದ್ರಗಳಲ್ಲಿ ಸ್ಥಳಾಂತರಿಸಲು ಸರ್ಕಾರಿ ಆದೇಶ ದಿನಾಂಕ 26/12/2006 ರನ್ವಯ ರೂ.555.00 ಕೋಟಿಗಳಿಗೆ ಆರ್ & ಆರ್ ಪ್ಯಾಕೇಜ್ ಮಂಜೂರಾಗಿದ್ದು, ಇದರಲ್ಲಿ ಅಥಣಿ ತಾಲ್ಲೂಕಿನ ನಾಗನೂರ ಪಿ.ಕೆ ಗ್ರಾಮವು ಸಹ ಒಳಗೊಂಡಿರುತ್ತದೆ.

ಸದರಿ ಗ್ರಾಮವನ್ನು ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ರಡ್ಡೇರಹಟ್ಟಿ ಗ್ರಾಮದ ಹತ್ತಿರದ 198 ಎಕರೆ 38 ಗುಂಟೆ ಸರ್ಕಾರಿ ಜಮೀನಿನಲ್ಲಿ (ಪುನರ್ವತಿ ಕೇಂದ್ರ 03) ಸ್ಥಳಾಂತರಿಸಲು ಯೋಜಿಸಲಾಗಿದ್ದು, ಈಗಾಗಲೇ ನಾಗನೂರ ಪಿ.ಕೆ ಗ್ರಾಮದ ಸಲುವಾಗಿ ಸದರಿ ಪುನರ್ವಸತಿ ಕೇಂದ್ರದಲ್ಲಿ ರಸ್ತೆ ಹಾಗೂ ಸಿ.ಡಿಗಳ ನಿರ್ಮಾಣ, ನಿವೇಶನಗಳನ್ನು ಗುರುತಿಸುವ ಕಾರ್ಯ, ವಿದ್ಯುತ್ತೀಕರಣ, ಚರಂಡಿ ನಿರ್ಮಾಣ, ಲೇವಲಿಂಗ್ (ನೆಲ ಸಮತಟ್ಟು ಮಾಡುವುದು) ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ರೂ.372.20 ಲಕ್ಷ ಮೊತ್ತದ ಮೂಲಭೂತ ಸೌಕರ್ಯ ಕಾಮಗಾರಿಗಳಾದ ಶಾಲಾ ಕಟ್ಟಡ, ಬಸ್ ನಿಲ್ದಾಣ, ಶೌಚಾಲಯ, ಧೋಬಿ ಕಟ್ಟಡ, ಪಂಚಾಯತ ಕಟ್ಟಡ, ದೇವಸ್ಥಾನ, ಮಸೀದಿ, ಅಂಗನವಾಡಿ ಕೇಂದ್ರ, ಸಮುದಾಯ ಭವನ, ಸಾರ್ವಜನಿಕ ಆಸ್ಪತ್ರೆ, ಪಶು ಆಸ್ಪತ್ರೆ, ಶಿಕ್ಷಕರ ವಸತಿ ಗೃಹ ಹಾಗೂ ಇತರೆ ಕಾಮಗಾರಿಗಳು ಪ್ರಗತಿಯಲ್ಲಿದ್ದು, ತ್ವರಿತವಾಗಿ ಪೂರ್ಣಗೊಳಿಸಿ ಸಂತ್ರಸ್ಥರಿಗೆ ನಿವೇಶನ ಹಂಚಿಕೆ ಮಾಡಿ ನಾಗನೂರ ಪಿ.ಕೆ ಗ್ರಾಮಸ್ಥರಿಗೆ ಅನುಕೂಲ ಕಲ್ಪಿಸಲಾಗುವುದು.

**ಸಂಖ್ಯೆ: ಜಸಂಇ 11 ಡಬ್ಲ್ಯೂಎಲ್ಎ 2021**

(ರಮೇಶ್ ಲ ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)